1) ಪಕ್ಕದ ಮನೆಯಲ್ಲಿ ಮೆಟಾಸಿಡ್ ಕ್ರಿಮಿನಾಶಕ ಔಷಧಿ ಸಿಂಪರಣೆ

2) ಪಕ್ಕದ ಟೊಮೋಟೋ ತೋಟಕ್ಕೆ ಕ್ರಿಮಿನಾಶಕ ಔಷಧಿ ಸಿಂಪರಣೆ.

ಶ್ರೀಯುತರಾದ ಆರ್. ವಿ. ನಾಗಣ್ಣ ಮತ್ತು ದಿವಾಕರ ಇವರಿಗೆ ಇಳುವರಿ ಕಡಿಮೆ ಬಂದಿದೆ. ಅಂದರೆ 100 ಮೊಟ್ಟೆಗೆ ಸುಮಾರು 15 ಕೆ.ಜಿ.

ಉಳಿದ ಎಲ್ಲಾ ರೇಷ್ಮೆ ಬೆಳೆಗಾರರು ಒಳ್ಳೆ ಬೆಲೆ ಪಡೆದಿದ್ದಾರೆ. ರೈತರು ಕೊಟ್ಟ ಮೊಟ್ಟೆ ಕಾಗದಗಳನ್ನು ವೀಕ್ಷಿಸಿದಾಗ ಶೇಕಡ್ವಾರು ಸುಮಾರು 95 ರಷ್ಟು ಚಾಕಿ.ಆಗಿದೆ

ಇದರಿಂದ ಸ್ಪಷ್ಟವಾಗಿ ಕಾಣಬರುವುದೇನೆಂದರೆ ಇಲಾಖಾ ಅಧಿಕಾರಿ ರೈತರಿಗೆ ಒದಗಿಸಿದ ಮೊಟ್ಟೆಗಳ ಗುಣಮಟ್ಟದಿಂದ ಬೆಳೆ ಕೆಟ್ಟಿಲ್ಲ, ಹುಳುಸಾಕಣೆ ಕಾಲದಲ್ಲಿ ಬಹಳ ಎಚ್ಚರ ವಹಿಸಬೇಕಾಗುತ್ತದೆ. ಪರಿಹಾರ ಕೊಡಲು ಬರುವುದಿಲ್ಲ.

(3) ಆರ್.ಎಲ್.ಇ.ಜಿ.ಪಿ.ಯೋಜನೆಯಲ್ಲಿ ನೇಮಿಸಿ ಕೊಂಡಿದ್ದ ದಿನಗೂಲಿ ಇಂಜಿನಿಯರ್‌ಗಳನ್ನು ಖಾಯಂ ಗೊಳಿಸುವುದು.

ಶ್ರೀ ಡಿ.ಎ. ಚಿನ್ನಪ್ಪ :– ಮಾನ್ಯ ಅಧ್ಯಕ್ಷರೇ, ಎನ್.ಆರ್.ಇ.ಪಿ. ಹಾಗೂ ಆರ್.ಎಲ್. ಈ.ಜೆ.ಪಿ. ಯೋಜನೆಗಳು ಪ್ರಸ್ತುತ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ವಿಲೀನಗೊಂಡಿರುವುದು ಸರಿಯಷ್ಟೆ.

ಎನ್ ಆರ್. ಈ.ಪಿ. ಯೋಜನೆಯಡಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ದಿನಗೂಲಿ ಇಂಜಿನಿಯರ್‌ಗಳನ್ನು ದಿನಾಂಕ 20–5–89ರ ಸರ್ಕಾರದ ಆದೇಶ ಸಂಖ್ಯೆ ಆರ್.ಡಿ.ಪಿ. ಪಿಬಿವಿ 89 ರಂತೆ ಜಿಲ್ಲಾ ಪರಿಷತ್‌ಗಳಲ್ಲಿ ಖಾಯಂಗೊಳಿಸಲಾಗಿದೆ. ಆದರೆ ಈವರೆಗೂ ಈ ಸೌಲಭ್ಯವನ್ನು ಆರ್.ಎಲ್.ಈ.ಜಿ.ಪಿ. ಯೋಜನೆಯಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ದಿನಗೂಲಿ ಇಂಜಿನಿಯರ್‌ಗಳಿಗೆ ಕಲ್ಪಿಸಿರುವುದಿಲ್ಲ. ಆದ್ದರಿಂದ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಎನ್.ಆರ್.ಈ.ಪಿ. ಯೋಜನೆಯ ಇಂಜಿಯರ್‌ಗಳ ಸೇವೆಯನ್ನು ಕ್ರಮಬದ್ಧಗೊಳಿಸಿದ ಆದೇಶವನ್ನು ಆರ್‌ಎಲ್.ಈ.ಜಿ.ಪಿ. ಯೋಜನೆಯಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ದಿನಗೂಲಿ ಇಂಜಿನಿಯರ್‌ಗಳಿಗೂ ವಿಸ್ತರಿಸಿ ಖಾಯಂಗೊಳಿಸುವ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ:– ಮಾನ್ಯ ಅಧ್ಯಕ್ಷರೇ, ಸರ್ಕಾರದ ಆದೇಶದ ಸಂ. ಆರ್‌ಡಿಪಿ ಎಡಿಪಿ 93:84 ದಿನಾಂಕ 1.12.1984ರಲ್ಲಿ ಆರ್.ಎಲ್.ಇ.ಜಿ.ಪಿ. ಯೋಜನೆಯ ಅಡಿಯಲ್ಲಿ ಕೆಲವು ಹುದ್ದೆಗಳನ್ನು ಹಿಂದಿನ ಡಿ.ಆರ್.ಡಿ.ಎಸ್. ಮತ್ತು ಸದರಿ ಯೋಜನೆಯನ್ನು ಕಾರ್ಯಗತಗೊಳಿಸುವ ಮೈನರ್ ಇರಿಗೇಷನ್ ಮತ್ತು ಮುಖ್ಯ ಇಂಜಿನಿಯರ್. ಸಂಪರ್ಕ ಮತ್ತು ಕಟ್ಟಡ ಇಲಾಖೆಗಳ ಅಧೀನಕ್ಕೆ ಸೃಷ್ಟಿಸಲಾಯಿತು. ಅದರಂತೆ ಸಿಬ್ಬಂದಿಯನ್ನು ಲೋಕೋಪಯೋಗಿ ಇಲಾಖೆಯು ನೇಮಕ ಮಾಡಿದೆ. ತದನಂತರ ಆರ್.ಎಲ್. ಈ.ಜಿ.ಪಿ. ಮತ್ತು ಎನ್.ಆರ್.ಇ.ಪಿ. ಯೋಜನೆಗಳು 1989–90ನೇ ಸಾಲಿನಲ್ಲಿ ಜವಾಹರ್ ರೋಜ್‌ಗಾರ್ ಯೋಜನೆಯೊಂದಿಗೆ ವಿಲೀನಗೊಂಡು ಅದರಡಿಯಲ್ಲಿ ಸಿಬ್ಬಂದಿ ವೆಚ್ಚವನ್ನು ಪ್ರಸಾದನೆ ಮಾಡಿರಲಿಲ್ಲ ಅದಕ್ಕಾಗಿ ಸರ್ಕಾರದ ಆದೇಶದ ದಿನಾಂಕ 26.7.1989ರಲ್ಲಿ ಕೆಲವು ಹುದ್ದೆಗಳನ್ನು ತೆಗೆದುಹಾಕಬೇಕಾಯಿತು. ಆದಾಗ್ಯೂ ಕೆಲವು ಸಹಾಯಕ ಇಂಜಿನಿಯರ್‌ಗಳು ಮತ್ತು ಕಿರಿಯ ಇಂಜಿನಿಯರ್‌ಗಳು ಜವಾಹರ್ ರೋಜ್‌ಗಾರ್ ಯೋಜನೆಯ ಅಡಿಯಲ್ಲಿ ಮುಂದುವರೆಯುತ್ತಿದ್ದಾರೆ ಮತ್ತು ಅವರು ಜಿಲ್ಲಾ ಪರಿಷತ್ತುಗಳ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಸರ್ಕಾರದ ಆದೇಶದ ಸಂ. ಆರ್‌ಡಿಪಿ 83 ಪಿಬಿವಿ:89 ದಿನಾಂಕ 20–5–1989ರಲ್ಲಿ ಹಿಂದಿನ ಡಿ.ಆರ್.ಡಿ.ಎಸ್ ಮತ್ತು ತಾಲ್ಲೂಕು ಬೋರ್ಡುಗಳಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿಯನ್ನು ಖಾಯಂಗೊಳಿಸಲು ಕೆಲವು ಮಾರ್ಗದರ್ಶನಗಳ ಮತ್ತು ಸೂಚನೆಗಳನ್ನು ನೀಡಿತ್ತು. ಅದರಂತೆ ಜಿಲ್ಲಾ ಪರಿಷತ್ತುಗಳು ಈ ಸಿಬ್ಬಂದಿಯನ್ನು ಜಿಲ್ಲಾ

ಪರಿಷತ್ತುಗಳಲ್ಲಿ ಖಾಯಂಗೊಳಿಸಲು ಕ್ರಮವನ್ನು ತೆಗೆದುಕೊಂಡಿರುತ್ತೆ. ಆರ್.ಎಲ್.ಇ.ಜಿ.ಪಿ. ಯೋಜನೆ ಅಡಿಯಲ್ಲಿ ನೇಮಕವಾಗಿರುವ ಸಿಬ್ಬಂದಿಯೂ ಸಹಾ, ಹಿಂದಿನ ಡಿ.ಆರ್.ಡಿ.ಎಸ್. ಮತ್ತು ಎನ್.ಆರ್.ಇ.ಪಿ. ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಲ್ಲಿನ ಸಿಬ್ಬಂದಿಯನ್ನು ಖಾಯಂಗೊಳಿಸಿದಂತೆ ಅವರನ್ನೂ ಸೇವೆಯಲ್ಲಿ ಖಾಯಂಗೊಳಿಸಬೇಕೆಂದು ಕೋರುತ್ತಿದ್ದಾರೆ.ಆರ್.ಎಲ್.ಇ.ಜಿ.ಪಿ. ಸಿಬ್ಬಂದಿಯನ್ನು ಲೋಕೋಪಯೋಗಿ ಇಲಾಖೆಯು ನೇಮಿಸಿದ್ದಿದ್ದರಿಂದ ಆ ಇಲಾಖೆಯನ್ನು ಸದರಿ ಸಿಬ್ಬಂದಿಯನ್ನು ಖಾಯಂಗೊಳಿಸುವ ಬಗ್ಗೆ ಪರಿಶೀಲಿಸಲು ಕೋರಲಾಯಿತು. ಆದರೆ ಆ ಇಲಾಖೆಯು ಸದರಿ ಆರ್.ಎಲ್.ಇ.ಜಿ.ಪಿ. ಯೋಜನೆಗೆ ನೇಮಿಸಿದ ಸಿಬ್ಬಂದಿಯನ್ನು ಖಾಯಂಗೊಳಿಸಲು ಅಸಮರ್ಥತೆಯನ್ನು ವ್ಯಕ್ತ ಪಡಿಸುತ್ತಾ, ಆ ಇಲಾಖೆಯಲ್ಲಿಯೇ ಈಗ ಸುಮಾರು ಸಿಬ್ಬಂದಿಯನ್ನು ತೆಗೆದು ಹಾಕಬೇಕೆನ್ನುವ ಪ್ರಪಾದನೆಯಿದೆಯೆಂದೂ, ಅದರಲ್ಲಿ ಕೆಲವು ಸಹಾಯಕ ಇಂಜಿನಿಯರ್‌ಗಳು ಮತ್ತು ಕಿರಿಯ ಇಂಜಿನಿಯರ್‌ಗಳು ಇರುತ್ತಾರೆಂದೂ, ಮತ್ತು ಈಗ ಈ ಸಿಬ್ಬಂದಿಯು ಜಿಲ್ಲಾ ಪರಿಷತ್ತುಗಳಲ್ಲಿ ಕೆಲಸ ಮಾಡುತ್ತಿರುವುದರಿಂದ, ಈ ಇಲಾಖೆಯನ್ನೇ ಇದರ ಬಗ್ಗೆ ಪರಿಶೀಲಿಸಲು ತಿಳಿಸಿರುತ್ತೆ.

ಇದರ ಬಗ್ಗೆ, ಪ್ರಸ್ತುತ ಕೊಡುಗು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತುಗಳಿಂದ ಮಾತ್ರ ಪ್ರಪಾದನೆಗಳು ಬಂದಿರುತ್ತವೆ. ಆದ್ದರಿಂದ ಉಳಿದ ಜಿಲ್ಲಾ ಪರಿಷತ್ತುಗಳಲ್ಲಿನ ಪ್ರಸ್ತುತ ಪರಿಸ್ಥಿತಿಯನ್ನು ತಿಳಿದುಕೊಂಡು ಸದರಿ ವಿಷಯವನ್ನು ಪರಿಶೀಲಿಸಲಾಗುವುದು.

ಅಂತೂ ಸದರಿ ವಿಷಯವು ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ.

(4) ಗ್ರಾಮ ಸಹಾಯಕರುಗಳನ್ನು "ಡಿ" ದರ್ಜೆಯ ನೌಕರರನ್ನಾಗಿ ಪರಿಗಣಿಸುವುದು

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):—ಮಾನ್ಯ ಅಧ್ಯಕ್ಷರೇ,ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದುಡಿಯುತ್ತಿರುವ ಗ್ರಾಮ ಸಹಾಯಕರು ಸರಿಯಾದ ಸಂಬಳವಿಲ್ಲದೆ ದೈನಂದಿನ ಜೀವನ ಸಾಗಿಸಲು ತುಂಬಾ ಕಷ್ಟಪಡುವಂತಹ ಪರಿಸ್ಥಿತಿ ಇದೆ. ಅವರಿಗೆ ಈಗ ತಿಂಗಳಿಗೆ ಸಿಗುವ ಸಂಬಳ ಹದಿನೈದು ದಿನಸಗಳಿಗೂ ಸಾಕಾಗುವುದಿಲ್ಲ. ಅಲ್ಲದೆ ಅವರಿಗೆ ಯಾವುದೇ ತರಹದ ಸವಲತ್ತುಗಳಿಲ್ಲದೆ ವಂಚಿತರಾಗಿದ್ದಾರೆ. ಜೀತಪದ್ಧತಿಯನ್ನು ನಿರ್ಮೂಲ ಮಾಡಬೇಕೆಂದು ಹೇಳುವ ಸರಕಾರ ಅವರನ್ನು ಜೀತದಾಳುಗಳಾಗಿ ದುಡಿಸುವುದು ಸರ್ವಥಾ ಸರಿಯಲ್ಲ. ಮತ್ತು ಅವರು ಪೂರ್ತಿ ಸಮಯ ಕೆಲಸ ಮಾಡಬೇಕಾಗಿರುವುದರಿಂದಲೂ ಈಗಿನ ಸಂಬಳ ಏನೇನೂ ಸಾಲದಿರುವುದರಿಂದಲೂ ಮತ್ತು ಹಲವಾರು ವರ್ಷಗಳಿಂದ ಅದೇ ಹುದ್ದೆಯಲ್ಲಿ ದುಡಿಯುತ್ತಿರುವುದರಿಂದಲೂ ಅವರಿಗೆ ಕಡೇ ಪಕ್ಷ ರೂ. 600 ರಷ್ಟಾದರೂ ಕೊಡಬೇಕು. ಹಾಗೂ ಅವರನ್ನು 'ಡಿ' ದರ್ಜೆಯ ನೌಕರರನ್ನಾಗಿ ಪರಿಗಣಿಸಬೇಕಾಗಿ ಸರಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):— ಕರ್ನಾಟಕ ಗ್ರಾಮಾಧಿಕಾರಿಗಳ ರದ್ದಿಯಾತಿ ಕಾಯಿದೆ 1961 ರನ್ವಯ ಎಲ್ಲಾ ಅನುವಂಶೀಯ ಗ್ರಾಮಾಧಿಕಾರಿಗಳ ಹುದ್ದೆಗಳನ್ನು ದಿನಾಂಕ 1–2–1963 ರಿಂದ ರದ್ದುಪಡಿಸಲಾಯಿತು. ಈ ಸ್ಥಾನದಲ್ಲಿದ್ದವರನ್ನು ಆಗಿಂದಾಗ್ಗೆ ಸರ್ಕಾರದ ಆಡಳಿತಾತ್ಮಕ ಆದೇಶಗಳನ್ವಯ ದಿನಾಂಕ 31–12–1978 ರವರೆಗೆ ಪರ್ಯಾಯ ವ್ಯವಸ್ಥೆ ಮಾಡುವ ತನಕ ಮುಂದುವರಿಸಲಾಯಿತು. ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 3 ಎಂವಿಎಸ್ 77 ದಿನಾಂಕ 16–6–1978 ರ ಮೇರೆಗೆ 8,941 ಸ್ಟೈಫಂಡರಿ ಗ್ರಾಮ ಸಹಾಯಕರ ಹುದ್ದೆಗಳನ್ನು ಗ್ರಾಮಸ್ಥರಿಗೆ ಮತ್ತು ಗ್ರಾಮಲೆಕ್ಕಾಧಿಕಾರಿಗಳಿಗೆ ಸಹಾಯ ಮಾಡಲು ತಿಂಗಳಿಗೆ 100 ರೂ. ಗಳ ನಿಗದಿತ ಸಂಭಾವನೆ ಮೇಲೆ ಮಂಜೂರು ಮಾಡಲಾಯಿತು. ಈ ನಿಗದಿತ ಮಾಸಿಕ ಸಂಭಾವನೆ ರೂ. 100 ಅನ್ನು ರೂ. 120 ಗಳಿಗೆ ದಿನಾಂಕ 5–6–1961 ರ ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 232 ಎಂವಿಎಸ್ 81 ರಲ್ಲಿ ಹೆಚ್ಚಿಸಲಾಯಿತು